## ನಕ್ಕುಬಿಡಿ



ಸರ್ಕಾರಿ ಬಸ್ಸೊಂದು ಉರುಳಿ ಕಮರಿಗೆ ಬಿತ್ತು. ಸುದೈವದಿಂದ ಡ್ರೈವರ್ ಬದುಕುಳಿದ. ಅವನ ಮೇಲೆ ಕೋರ್ಟಿನಲ್ಲಿ ಕೇಸ್ ದಾಖಲಾಯಿತು.

'ಬಸ್ ಕಮರಿಗೆ ಹೇಗೆ ಬಿತ್ತು?' ನ್ಯಾಯಾಧೀಶರು ಅವನನ್ನು ಪ್ರಶ್ನಿಸಿದರು.

'ಹೇಗೆ ಬಿತ್ತೋ ನನಗೆ ಗೊತ್ತಿಲ್ಲ ಸಾರ್' ಎಂದ

'ಬಸ್ ನೀನೇ ಚಲಾಯಿಸುತ್ತಿದ್ದೆಯಲ್ಲ?' ನ್ಯಾಯಾಧೀಶರು ಪ್ರಶ್ನಿಸಿದರು.

'ಹೌದು ನಾನೇ ಚಲಾಯಿಸುತ್ತಿದ್ದೆ. ಆದರೆ ಅಂದು ಕಂಡಕ್ಟರ್ ಬಂದಿರಲಿಲ್ಲವಾದರಿಂದ ಟಿಕೆಟ್ ನೀಡಲು ಸ್ವಲ್ಪ ಹೊತ್ತು ಹಿಂದೆ ಹೋಗಿದ್ದೆ.' ಎಂದ ಡ್ರೈವರ್!

★★★



'ನನ್ನ ಚಹಾದಲ್ಲಿ ನೊಣ ಮುಳುಗಿ ಸತ್ತಿದೆ' ಎಂದ ಗಿರಾಕಿ.

'ಅದಕ್ಕೆ ನಾನೇನು ಮಾಡಲಿ? ನಾನು ಸಪ್ಲೈ ಮಾಡಲೇ ಅಥವಾ ಅದಕ್ಕೆ ಈಜುವುದನ್ನು ಕಲಿಸಲೇ?' ಎಂದು ಕೇಳಿದ ಮಾಣಿ.

★★★

ಕರಡಿಗೆ ಮೈತುಂಬ ಕೂದಲು ಏಕೆ ಇರುತ್ತದೆ? ಎಂದು ಗುಂಡನ ಶಿಕ್ಷಕರು ಗುಂಡನನ್ನು ಪ್ರಶ್ನಿಸಿದರು.

'ಕಾಡಿನಲ್ಲಿ ಕಟಿಂಗ್ ಶಾಪ್ ಎಲ್ಲಿರುತ್ತದೆ'? ಅದಕ್ಕೇ ಎಂದ ಗುಂಡ.

★★★

ತುಂಬ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ ಕಂಪೆನಿಯೊಂದರ ಕರ್ಮಚಾರಿಗೆ ಅವನ ಬಾಸ್ ಐದು ಸಾವಿರ ರೂ.ಗಳ ಚೆಕ್ಕೊಂದನ್ನು ನೀಡುತ್ತ, 'ಹೀಗೆ ನಿಯತ್ತಿನಿಂದ ಕೆಲಸ ಮಾಡಿದರೆ ಇದರ ಮೇಲೆ ಸಹಿ ಮಾಡುತ್ತೇನೆ' ಎಂದು ಹೇಳಿದ.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್.**

ಒಬ್ಬ ಬ್ಯಾಂಡೇಜ್ ಹಾಕಿಸಿಕೊಳ್ಳಲು ಆಸ್ಪತ್ರೆಗೆ ಬಂದ.

ವೈದ್ಯರು ಅವನನ್ನು ವಿಚಾರಿಸಿದರು: 'ಇಷ್ಟು ದೊಡ್ಡ ಗಾಯ ಹೇಗಾಯಿತು?'

ನಾನು ತಾಜ್ ಮಹಲ್ ಹೋಟೆಲ್ ಮುಂದೆ ಹಾದು ಹೋಗುತ್ತಿದ್ದೆ. ಅಲ್ಲಿ ಒಬ್ಬ ಸಿನಿಮಾ ನಟಿ ಉಳಿದುಕೊಂಡಿದ್ದಳು. ಅವಳು ಹೋಟೆಲ್‌ನ ಬಾಲ್ಕನಿಯಲ್ಲಿ ನಿಂತು ವ್ಯಾಯಾಮ ಮಾಡುತ್ತಿದ್ದಳು. ನಾನು ಅಲ್ಲಿಯೇ ಇದ್ದ ಏಣಿ ಹತ್ತಿ ಅವಳನ್ನು ನೋಡುತ್ತಿರುವಾಗ ಏಣಿ ಜಾರಿ ಕೆಳಗೆ ಬಿತ್ತು...

'ಏಣಿ ಅಷ್ಟು ವೀಕ್ ಆಗಿತ್ತೇ?'

ಸಾರ್, ಏಣಿ ತುಂಬಾ ಸ್ಟ್ರಾಂಗ್ ಆಗಿಯೇ ಇತ್ತು. ಆದರೆ ಅದರ ಮೇಲೆ ಒಂದೇ ಸಲಕ್ಕೆ ಮುವತ್ತು ಜನ ನಿಂತರೆ ಅದು ತಡೆದುಕೊಳ್ಳಲು ಸಾಧ್ಯವೇ?

★★★

ಕುಡುಕ ಗಂಡ ನಡುರಾತ್ರಿಗೆ ಓಲಾಡಿಕೊಂಡು ಮನೆಗೆ ಬಂದು ಬಾಗಿಲು ಬಡಿದ. ಹೆಂಡತಿ ರೇಗಿ ಬಾಗಿಲು ತೆರೆಯುತ್ತಾ ಕೇಳಿದಳು: ಮತ್ತೆ ಕುಡಿದು ಬಂದಿರಾ? ಕಾರನ್ನು ಎಲ್ಲಿ ಬಿಟ್ಟು ಬಂದಿರಿ?

'ಕಾರ್ ಸ್ಟಾರ್ಟ್ ಆಗಲೇ ಇಲ್ಲ. ಅದರ ಎಂಜಿನ್‌ನಲ್ಲಿ ನೀರು ಸೇರಿಕೊಂಡಿತ್ತು.'

'ಮಳೆ ಬಂದಿಲ್ಲವಲ್ಲ, ಎಂಜಿನ್ ಒಳಗೆ ನೀರು ಹೇಗೆ ಹೋಗುತ್ತೆ?' ಹೆಂಡತಿ ಮತ್ತೂ ರೇಗಿದಳು.

'ಕಾರು ಕೆರೆಯೊಳಗೆ ಹೋಯ್ತು, ಅದು ಅಲ್ಲಿಯೇ ನಿಂತಿದೆ' ಗಂಡ ಮತ್ತೆ ಓಲಾಡಿದ.

**(ಸಂಗ್ರಹ) ಡಿ.ಎನ್.ಶ್ರೀನಾಥ್**


# ಪುರುಷರಿಗೆ ಗೈನಕೋಮಾಸ್ಟಿಯಾ



ಗೈನಕೋಮಾಸ್ಟಿಯಾ ಹುಡುಗರಿಂದ ವಯಸ್ಸಾದವರಿಗೂ ಕಾಡುವ ಒಂದು ಮುಜುಗರ ಸಂಗತಿ, ಇಲ್ಲಿ ಎದೆಯ ಭಾಗ ಹೆಚ್ಚು ಉಬ್ಬಿ ನಂತಾಗಿರುತ್ತದೆ. ಇದು ಹುಡುಗರಲ್ಲಿ ಸಾಮಾನ್ಯವಾಗಿ 14–16 ರಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ 1 ವರ್ಷದಲ್ಲಿ ಕಡಿಮೆಯಾಗಿ ಸರಿಹೋಗುತ್ತದೆ. ಆದರೆ ಕೆಲವರಲ್ಲಿ ಇದು ಹಾಗೆಯೇ ಉಳಿಯುತ್ತದೆ ಅಥವಾ ಗಾತ್ರದಲ್ಲಿ ಹೆಚ್ಚಾಗುತ್ತದೆ. ಇದರಿಂದ ಹುಡುಗರಿಗೆ ಸರಿಯಾದ ಉಡುಪುಗಳನ್ನು ಧರಿಸುವುದಕ್ಕೆ ತೊಂದರೆಯಾಗುತ್ತದೆ, ಆಟಗಳಲ್ಲಿ ಭಾಗವಹಿಸುವುದಕ್ಕೆ ಮುಜುಗರ, ಸ್ನೇಹಿತರ ಅಥವಾ ಸಂಬಂಧಿಕರ ಜೊತೆ ಬೆರೆಯಲು ಆತಂಕ ಹಾಗೂ ಮುಜುಗರವಾಗುತ್ತದೆ. ಮಾನಸಿಕ ಖಿನ್ನತೆಯಿಂದ ವ್ಯಾಸಂಗದಲ್ಲಿ ಹಿಂದುಳಿಯುವುದು, ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುವುದು ಸಾಮಾನ್ಯವಾಗಿರುತ್ತದೆ.

ಆಹಾರದಲ್ಲಿ ಎಣ್ಣೆ ಕಡಿಮೆ ಮಾಡುವುದು ಹಾಗೂ ವ್ಯಾಯಾಮ ಮಾಡುವುದರಿಂದ ಯಾವುದೇ ಬದಲಾವಣೆಗಳು ಇರುವುದಿಲ್ಲ. ಯಾಕೆಂದರೆ ಆ ಜಾಗದಲ್ಲಿ ಕೊಬ್ಬು ಕರಗದೆ ಇರುವುದು ಮತ್ತು ಗ್ರಂಥಿಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ನೈಸರ್ಗಿಕ ವಿಧಾನಗಳಲ್ಲಿ ಬದಲಾವಣೆ ಸಾಧ್ಯವಿರುವುದಿಲ್ಲ.

ಲೈಪೋಸಕ್ಷನ್ ಮತ್ತು ಗ್ರಂಥಿಗಳನ್ನು ಪೂರ್ಣವಾಗಿ ತೆಗೆಯುವುದರಿಂದ ಈ ಸಮಸ್ಯೆಯಿಂದ ಜೀವನ ಪರ್ಯಂತ ಪರಿಹಾರ ಕಂಡುಕೊಳ್ಳಬಹುದು. ಇದು ಒಂದು ದಿನದ ಕಾಸ್ಮೆಟಿಕ್ ಸರ್ಜರಿಯಾಗಿದ್ದು, ಮರುದಿನದಿಂದ ದೈನಂದಿನ ಕರ್ತವ್ಯಗಳಲ್ಲಿ ಭಾಗವಹಿಸಬಹುದು. ಸರಿಯಾದ ಉಡುಪುಗಳನ್ನು ಧರಿಸಿ ಖಿನ್ನತೆಯಿಂದ ಹೊರಬರಬಹುದು.

**ಇನ್ನಿತರೆ ಸೇವೆಗಳು** : ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ ಮತ್ತು ಕೋರಮಂಗಲ, ಬೆಂಗಳೂರು.**

**www.curlsncurves.com**

**8088400400** **9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

**ಹೆಚ್ಚಿನ ಮಾಹಿತಿಗಾಗಿ ದಿನಾಂಕ 27.02.17 ಸೋಮವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ**